ಕರ್ನಾಟಕ ಸರ್ಕಾರ

ಸಂಖ್ಯೆ: ಇಡಿ 62 ವಿವಿಧ 2018

ಕರ್ನಾಟಕ ಸರ್ಕಾರದ ಸಚಿವಾಲಯ
ಬಹುಮಹಡಿ ಕಟ್ಟಡ,
ಬೆಂಗಳೂರು, ದಿನಾಂಕ:29/01/2019

**ಇವರಿಂದ:**
ಸರ್ಕಾರದ ಪ್ರಧಾನ ಕಾರ್ಯದರ್ಶಿ,
ಶಿಕ್ಷಣ ಇಲಾಖೆ (ಉನ್ನತ ಶಿಕ್ಷಣ),
**ಬೆಂಗಳೂರು – 560 001.**

17354

**ಇವರಿಗೆ:**
1. ಆಯುಕ್ತರು, ಕಾಲೇಜು ಶಿಕ್ಷಣ ಇಲಾಖೆ, ಬೆಂಗಳೂರು-560 001.
2. ನಿರ್ದೇಶಕರು, ತಾಂತ್ರಿಕ ಶಿಕ್ಷಣ ನಿರ್ದೇಶನಾಲಯ, ಬೆಂಗಳೂರು-560 001.
3. ಕುಲಸಚಿವರು, ಬೆಂಗಳೂರು ವಿಶ್ವವಿದ್ಯಾಲಯ, ಬೆಂಗಳೂರು
4. ಕುಲಸಚಿವರು, ಮೈಸೂರು ವಿಶ್ವವಿದ್ಯಾಲಯ, ಮೈಸೂರು-570 005.
5. ಕುಲಸಚಿವರು, ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ-580 003.
6. ಕುಲಸಚಿವರು, ಗುಲ್ಬರ್ಗಾ ವಿಶ್ವವಿದ್ಯಾಲಯ, ಗುಲ್ಬರ್ಗ-585 106.
7. ಕುಲಸಚಿವರು, ಮಂಗಳೂರು ವಿಶ್ವವಿದ್ಯಾಲಯ, ಮಂಗಳೂರು-574 199.
8. ಕುಲಸಚಿವರು, ಕುವೆಂಪು ವಿಶ್ವವಿದ್ಯಾಲಯ, ಬಿ.ಆರ್. ಪ್ರಾಜೆಕ್ಟ್-577 451.
9. ಕುಲಸಚಿವರು, ತುಮಕೂರು ವಿಶ್ವವಿದ್ಯಾಲಯ, ತುಮಕೂರು-572 101
10. ಕುಲಸಚಿವರು, ಕನ್ನಡ ವಿಶ್ವವಿದ್ಯಾಲಯ, ಹಂಪಿ-583 276.
11. ಕುಲಸಚಿವರು, ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾಲಯ, ಮೈಸೂರು-570 006.
12. ಕುಲಸಚಿವರು, ಕರ್ನಾಟಕ ರಾಜ್ಯ ಮಹಿಳಾ ವಿಶ್ವವಿದ್ಯಾಲಯ, ಬಿಜಾಪುರ-586 101
13. ಕುಲಸಚಿವರು, ವಿಶ್ವೇಶ್ವರಯ್ಯ ತಾಂತ್ರಿಕ ವಿಶ್ವವಿದ್ಯಾಲಯ, ಬೆಳಗಾಂ-590 014.
14. ಕುಲಸಚಿವರು, ರಾಣಿ ಚನ್ನಮ್ಮ ವಿಶ್ವವಿದ್ಯಾಲಯ, ಬೆಳಗಾಂ.
15. ಕುಲಸಚಿವರು, ದಾವಣಗೆರೆ ವಿಶ್ವವಿದ್ಯಾಲಯ, ದಾವಣಗೆರೆ
16. ಕುಲಸಚಿವರು, ವಿಜಯನಗರ ಶ್ರೀಕೃಷ್ಣದೇವರಾಯ ವಿಶ್ವವಿದ್ಯಾಲಯ, ಬಳ್ಳಾರಿ.
17. ಕುಲಸಚಿವರು, ಡಾ॥ ಗಂಗೂಬಾಯಿ ಹಾನಗಲ್ ಸಂಗೀತ ಮತ್ತು ಪ್ರದರ್ಶಕ ಕಲೆಗಳ ವಿಶ್ವವಿದ್ಯಾಲಯ, ಮೈಸೂರು.
18. ಕುಲಸಚಿವರು, ಕರ್ನಾಟಕ ರಾಜ್ಯ ಸಂಸ್ಕೃತ ವಿಶ್ವವಿದ್ಯಾಲಯ, ಬೆಂಗಳೂರು -560 018.
19. ಕುಲಸಚಿವರು, ಕರ್ನಾಟಕ ಜಾನಪದ ವಿಶ್ವವಿದ್ಯಾಲಯ, ವಿಜಯನಗರ, ಬೆಂಗಳೂರು

ಮಾನ್ಯರೆ,

**ವಿಷಯ:** ಗಾಂಧೀ ಚರಕ ಖರೀದಿಸುವ ಬಗ್ಗೆ.

****

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ, ಶ್ರೀ ಶ್ರೀಧರ ಮೂರ್ತಿ, ಮ್ಯಾನೇಜಿಂಗ್ ಟ್ರಸ್ಟಿ, ದೇಶಿ ಸೇವಾ ಫೌಂಡೇಷನ್, ಇವರ ಮನವಿ, ದಿನಾಂಕ:14/01/2019 ಹಾಗೂ ಅದರೊಂದಿಗಿನ ಅಡಕಗಳ ಪ್ರತಿಯನ್ನು

...2

ಇದರೊಂದಿಗೆ ಲಗತ್ತಿಸಿದೆ, ಸದರಿಯವರು ತಮ್ಮ ಮನವಿ ಪತ್ರದಲ್ಲಿ ಕೋರಿರುವ ಅಂಶಗಳನ್ನು ಪರಿಶೀಲಿಸಿ, ನಿಯಮಾನುಸಾರ ಸೂಕ್ತ ಕ್ರಮವಹಿಸುವಂತೆ ತಮ್ಮನ್ನು ಕೋರಲು ನಿರ್ದೇಶಿತನಾಗಿದ್ದೇನೆ.

ತಮ್ಮ ನಂಬುಗೆಯ,

09/01/19

(ಎಂ.ಎ. ಅಹಮದ್ ಜಾನ್)

**ಸರ್ಕಾರದ ಅಧೀನ ಕಾರ್ಯದರ್ಶಿ**
**ಉನ್ನತ ಶಿಕ್ಷಣ ಇಲಾಖೆ**
**(ವಿಶ್ವವಿದ್ಯಾಲಯ-2 & ಸಾಮಾನ್ಯ-2).**

ಪ್ರತಿ:

ಶ್ರೀ ಶ್ರೀಧರ ಮೂರ್ತಿ, ಮ್ಯಾನೇಜಿಂಗ್ ಟ್ರಸ್ಟಿ, ದೇಶಿ ಸೇವಾ ಫೌಂಡೇಷನ್‌ನಂ.ಬಿ-18, ಗೋಧೂಳಿ, 2ನೇ ಮಹಡಿ, 2ನೇ ಮುಖ್ಯ ರಸ್ತೆ, ಕೆ.ಇ.ಬಿ ಲೇ ಔಟ್, ಬಿಟಿಎಂ 1ನೇ ಹಂತ, ಬೆಂಗಳೂರು-560029

ಸಂಖ್ಯೆ: ಡಿಟಿಇ/ಎನ್‌ಎಸ್‌ಎಸ್/ಚಟುವಟಿಕೆ/05/2017-18 ದಿನಾಂಕ: 14.02.2019

**ಹಿಂಬರಹ**

ಸರ್ಕಾರದ ಅಧೀನ ಕಾರ್ಯದರ್ಶಿಗಳುಉನ್ನತ ಶಿಕ್ಷಣ ಇಲಾಖೆ ಅದೇಶ ಸಂಖ್ಯೆ: ಇಡಿ 62 ವಿವಿಧ 2018 ದಿನಾಂಕ: 29-01-2019 ರ ಮಾಹಿತಿಯ ಪತ್ರವನ್ನು ನಿರ್ದೇಶನಾಲಯದ ಅಡಿಯಲ್ಲಿರುವ ರಾಜ್ಯದ ಎಲ್ಲಾ ತಾಂತ್ರಿಕ ಶಿಕ್ಷಣ ಸಂಸ್ಥೆಗಳ ಪ್ರಾಚಾರ್ಯರುಗಳಿಗೆ ಮಾಹಿತಿಗಾಗಿ ಮತ್ತು ಮುಂದಿನ ಸೂಕ್ತ ಕ್ರಮಕ್ಕಾಗಿ

ನಿರ್ದೇಶಕರು

ಇವರಿಗೆ ,

1) ನಿರ್ದೇಶನಾಲಯಕ್ಕೊಳಪಡುವ ರಾಜ್ಯದ ಎಲ್ಲಾ ತಾಂತ್ರಿಕ ಶಿಕ್ಷಣ ಸಂಸ್ಥೆಗಳ ಪ್ರಾಚಾರ್ಯರುಗಳಿಗೆ-ಸೂಕ್ತ ಕ್ರಮಕ್ಕಾಗಿ
2) ಸರ್ಕಾರದ ಅಧೀನ ಕಾರ್ಯದರ್ಶಿ ಉನ್ನತ ಶಿಕ್ಷಣ ಇಲಾಖೆ (ವಿಶ್ವವಿದ್ಯಾಲಯ-2 & ಸಾಮಾನ್ಯ-2 ಇವರಿಗೆ ಮಾಹಿತಿಗಾಗಿ
3) ಇ-ಗೌರ್ನರ್ಸ್ ಇಲಾಖಾ ಅಂತರ್ಜಾಲತಾಣದಲ್ಲಿ ಪ್ರಕಟಿಸಲು.
4) ಕಚೇರಿ ಕಡತಕ್ಕೆ

148

JNR 221-15-16

# ದೇಶಿ ಸೇವಾ ಫೌಂಡೇಷನ್ (ರಿ)

ಇವರಿಗೆ,

ದಿನಾಂಕ : 14-01-2019

ಸನ್ಮಾನ್ಯ ಶ್ರೀ. ಜಿ.ಟಿ. ದೇವೇಗೌಡ ರವರು
ಮಾನ್ಯ ಉನ್ನತ ಶಿಕ್ಷಣ ಸಚಿವರು
ಕರ್ನಾಟಕ ರಾಜ್ಯ ಸರ್ಕಾರ, ವಿಧಾನ ಸೌಧ, ಬೆಂಗಳೂರು

ಸನ್ಮಾನ್ಯರೇ,

**ವಿಷಯ : ಮಹಾತ್ಮ ಗಾಂಧೀಜಿಯವರ ಸ್ವಾವಲಂಭನೆಯ ಪ್ರತೀಕವಾದ ಮಾದರಿ ಚರಕಗಳನ್ನು ಗೃಹ ಕೈಗಾರಿಕಾ ವಿಧಾನದಲ್ಲಿ ತಯಾರಿಸಿ ಉನ್ನತ ಶಿಕ್ಷಣ ವಿದ್ಯಾಲಯಗಳಿಗೆ ನೀಡುವ ಬಗ್ಗೆ**

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ ಈ ಕೆಳಕಂಡ ಅಂಶಗಳನ್ನು ತಮ್ಮಲ್ಲಿ ಅರಿಕೆಮಾಡಿಕೊಡುತ್ತಿದ್ದೇವೆ.

ನಮ್ಮ ಸಂಸ್ಥೆಯು ಜನರಲ್ಲಿ ಅದರಲ್ಲೂ ಯುವ ಜನತೆಯಲ್ಲಿ ರಾಷ್ಟ್ರಪ್ರೇಮ, ಸಾಮಾಜಿಕ ಕಳಕಳಿ, ಗ್ರಾಮೀಣ ಪ್ರದೇಶಗಳ ಸಮಸ್ಯೆಗಳ ಬಗ್ಗೆ ಅರಿವು ಮೂಡಿಸುವ ಮತ್ತು ಸಾಮಾಜಿಕ ಸೇವೆಯ ಕಾರ್ಯಗಳನ್ನು ಮಾಡುತ್ತಾ ಬಂದಿರುತ್ತೇವೆ.

ಸ್ವಾತಂತ್ರ್ಯ ಹೋರಾಟದಲ್ಲಿ ಮಹಾತ್ಮ ಗಾಂಧೀಜಿಯವರು ಚರಕದಿಂದ ನೂಲು ನೇಯುವುದನ್ನು ಸ್ವಾವಲಂಬನೆಯ ಅಸ್ತ್ರವಾಗಿ ಬಳಸಿರುವುದು ಎಲ್ಲರಿಗೂ ಗೊತ್ತಿರುವ ವಿಚಾರವಾಗಿದೆ.

ಈ ನಿಟ್ಟಿನಲ್ಲಿ **ಸ್ವಾತಂತ್ರ್ಯ ಸಂಗ್ರಾಮದಲ್ಲಿ ಸ್ವದೇಶಿ ತತ್ವ ಮತ್ತು ಭಾವನೆಗಳನ್ನು ದೇಶಾದ್ಯಂತ ವ್ಯಾಪಿಸಲು ಪೂಜ್ಯ ಮಹಾತ್ಮ ಗಾಂಧೀಜಿಯವರು ಅಹಿಂಸಾತ್ಮಕ ಮತ್ತು ಸ್ವಾವಲಂಬನೆಯ ಅಸ್ತ್ರವಾಗಿ ಬಳಸಿದ ಅಂತರಾಷ್ಟ್ರೀಯ ಖ್ಯಾತಿಯ ಮಾದರಿ ಚರಕಗಳನ್ನು ಗೃಹ ಕೈಗಾರಿಕಾ ವಿಧಾನದಲ್ಲಿ ತಯಾರಿಸಿ ಇತಿಹಾಸದ ನೆನಪಾಗಿ ಶಾಲಾ ಕಾಲೇಜುಗಳಿಗೆ, ಹಾಗೂ ವಿಶ್ವವಿದ್ಯಾನಿಲಯಗಳಿಗೆ ಸರಬರಾಜು ಮಾಡಲು ನಮ್ಮ ಸಂಸ್ಥೆಯು ಯೋಜಿಸಿದೆ.**

ಈ ಬಗ್ಗೆ ಹಿಂದಿನ ಸರ್ಕಾರವು **ಆದೇಶದ ಸಂಖ್ಯೆ ಇಡಿ:83 ಎಂ.ಸಿ.ಡಿ. 2014, ದಿನಾಂಕ 31-07-2014** ರಲ್ಲಿ ಆದೇಶವನ್ನು ಹೊರಡಿಸಿರುತ್ತದೆ. ಆದರೆ ಸದರಿ ಆದೇಶದನ್ವಯ ಹಿಂದಿನ ಕಂದಾಯ ಸಚಿವರು ನಡವಳಿಯನ್ನು ಕಳುಹಿಸಿದ್ದು **[ನಡವಳಿ ಸಂಖ್ಯೆ : ಕಂಸಕ/2424/2017 ದಿನಾಂಕ 02-05-2017]**, ಸದರಿ ನಡವಳಿಯಲ್ಲಿ ಬಹುತೇಕ ಶಾಲಾ ಕಾಲೇಜುಗಳ ಸಂಚಿತ ನಿಧಿಯಲ್ಲಿ ಹಣವಿಲ್ಲದಿರುವುದರಿಂದ, ಶಾಲಾ ಕಾಲೇಜುಗಳ ಬೇರೆ ಯಾವುದಾದರೂ ಅನುದಾನದಿಂದ ಸದರಿ ಮಾದರಿ ಚರಕಗಳನ್ನು ನಮ್ಮ ಸಂಸ್ಥೆಯಿಂದ ಖರೀದಿಸಲು ಸೂಕ್ತ ಆದೇಶ ಹೊರಡಿಸುವಂತೆ ಕೋರಿರುತ್ತಾರೆ.

ತಾವುಗಳು ಈ ಬಗ್ಗೆ ಸೂಕ್ತಕ್ರಮ ಕೈಗೊಂಡು, ಮಾದರಿ ಚರಕಗಳನ್ನು ಖರೀದಿಸಿ ಉನ್ನತ ಶಿಕ್ಷಣ ವಿದ್ಯಾಲಯಗಳಿಗೆ ಸರಬರಾಜು ಮಾಡಲು ಆದೇಶ ಹೊರಡಿಸಿ, ಈ ಮೂಲಕ ಚರಕದ ಮಹತ್ವವನ್ನು ವಿದ್ಯಾರ್ಥಿಗಳಿಗೆ ತಿಳಿಯುವಂತೆ ಮಾಡಿ ಅವರುಗಳಲ್ಲಿ ರಾಷ್ಟ್ರಪ್ರೇಮವನ್ನು ಜಾಗೃತಗೊಳಿಸಲು ನಮಗೆ ಸದಾವಕಾಶವನ್ನು ಕಲ್ಪಿಸಿಕೊಡಬೇಕಾಗಿ ತಮ್ಮಲ್ಲಿ ವಿನಂತಿಸುತ್ತಿದ್ದೇವೆ. ತಮ್ಮ ಅವಗಾಹನೆಗಾಗಿ ಸಂಬಂಧಪಟ್ಟ ಆದೇಶಗಳ ನಕಲುಪ್ರತಿಗಳನ್ನು ಈ ಪತ್ರದೊಂದಿಗೆ ಲಗತ್ತಿಸಲಾಗಿದೆ.

ಮಾದರಿ ಚರಕದ ಜೊತೆಯಲ್ಲಿ ಚರಕದ ಇತಿಹಾಸವನ್ನು ತಿಳಿಸುವ ಒಂದು ಸಿ.ಡಿ.ಯನ್ನೂ ಸಹಾ ನೀಡುತ್ತೇವೆ

ದಯಮಾಡಿ ಉಪಕರಿಸುವಿರಾಗಿ ನಂಬಿರುತ್ತೇವೆ.
ವಂದನೆಗಳೊಂದಿಗೆ,

14/1/19

14/1/19

ಇಂತಿ ತಮ್ಮ ವಿಶ್ವಾಸಿ
ದೇಶಿ ಸೇವಾ ಫೌಂಡೇಷನ್ ಪರವಾಗಿ
[ಶ್ರೀಧರ್ ಮೂರ್ತಿ]
ಮ್ಯಾನೇಜಿಂಗ್ ಟ್ರಸ್ಟಿ

ನಂ. ಬಿ-18, ಗೋಧೂಳಿ, 2ನೇ ಮಹಡಿ, 2ನೇ ಮುಖ್ಯರಸ್ತೆ, ಕೆ.ಇ.ಬಿ. ಲೇಔಟ್, ಬಿಟಿಎಂ 1ನೇ ಹಂತ, ಬೆಂಗಳೂರು - 560 029.
Ph : 8317312611 / 9738019090 E-mail : desifoundation2020@gmail.com

# ದೇಶಿ ಸೇವಾ ಫೌಂಡೇಷನ್ (ರಿ)

## ಮಾದರಿ ಚರಕ ತಯಾರಿಕಾ ವೆಚ್ಚದ ಅಂದಾಜು ಪಟ್ಟಿ

| ಕ್ರ.ಸಂ. | ಸಾಮಾಗ್ರಿಗಳು | ಸಾಮಾಗ್ರಿಗಳ ವಿವರ | ಮೊತ್ತ (₹) |
|---|---|---|---|
| 1 | ಚರಕ | ಗುಜರಾತ್ ಖಾದಿ ಗ್ರಾಮೋದ್ಯೋಗದಿಂದ ಖರೀದಿಸುವುದು | 840.00 |
| 2 | ಸಾಗಾಣೆ ವೆಚ್ಚ | ಗುಜರಾತಿನ ಅಹಮದಾಬಾದ್‌ನಿಂದ ಬೆಂಗಳೂರಿಗೆ | 200.00 |
| 3 | ಕ್ಯಾರಿ ಬಾಕ್ಸ್ | | 50.00 |
| 4 | ಅಕ್ರಿಲಿಕ್ ಬಾಕ್ಸ್ | 8.5 ಚ.ಅಡಿ ₹150/-ಚ.ಅಡಿಯೊಂದಕ್ಕೆ | 1,275.00 |
| 5 | ಅಕ್ರಿಲಿಕ್ ಬಾಕ್ಸ್ ಗೋಲ್ಡ್ ಫ್ರೇಮ್ | 6.0 ಅಡಿ ₹60/- ಅಡಿಯೊಂದಕ್ಕೆ | 360.00 |
| 6 | ಅಕ್ರಿಲಿಕ್ ಬಾಕ್ಸ್ ಫ್ರೇಮ್ ಡೂಮ್ | 10.0 ಅಡಿ ₹50/- ಅಡಿಯೊಂದಕ್ಕೆ | 500.00 |
| 7 | ವುಡ್ ಬೇಸ್ ಮತ್ತು ಉಲ್ಲನ್ ಮ್ಯಾಟ್ | ಬಾಕ್ಸ್‌ನ ತಳಹದಿ | 400.00 |
| 8 | ಲೇಬಲ್ | ಗಾಂಧೀಜಿಯವರ ಮೋನೋಗ್ರಾಮ್ ಇರುವಂತಹದ್ದು | 100.00 |
| 9 | ಕಾರ್ಟನ್ ಬಾಕ್ಸ್ | | 100.00 |
| 10 | ವಿಡಿಯೋ ಸಿ.ಡಿ. | ಚರಕದ ಇತಿಹಾಸದ ಚಿತ್ರಣಗಳನ್ನೊಳಗೊಂಡಿರುವುದು | 150.00 |
| 11 | ಪ್ಯಾಕಿಂಗ್ ಸಾಮಾಗ್ರಿ | | 50.00 |
| 12 | ಬಾಕ್ಸ್ ಲೇಬರ್ | ಪವರ್ ಮೌಲ್ಡಿಂಗ್ | 350.00 |
| 13 | ಸ್ಟಿಕರಿಂಗ್ ಸಾಮಾಗ್ರಿ | | 75.00 |
| 14 | ಇತರೆ ಖರ್ಚುಗಳು | ಉಗ್ರಾಣ ಬಾಡಿಗೆ, ಕೂಲಿ, ಇತರೆ | 350.00 |
| 15 | ಟ್ರಸ್ಟ್ ನಿಧಿ | ಸಾಮಾಜಿಕ ಜಾಗೃತಿ ಕಾರ್ಯಕ್ರಮಗಳಿಗಾಗಿ | 400.00 |
| 16 | ಸ್ಥಳೀಯ ಸಾಗಾಣಿಕ ವೆಚ್ಚ | | 250.00 |
| | ಒಟ್ಟು [ಸಾಗಾಣಿಕಾ ಹಾನಿ (Transportation Damage) ಹೊರತುಪಡಿಸಿ] | | 5,450.00 |

**ಒಟ್ಟು ಅಂದಾಜು ವೆಚ್ಚ ಐದು ಸಾವಿರದ ನಾಲ್ಕು ನೂರಾ ಐವತ್ತು ರೂಪಾಯಿಗಳು.**
**ಸರ್ಕಾರದ ಆದೇಶ ಸಂಖ್ಯೆ ಇ.ಡಿ:83 ಎಂ.ಸಿ.ಡಿ. 2014ರಲ್ಲಿ ರೂ.4950/-ನಿಗದಿ ಪಡಿಸಿದ್ದು ಹಾಲಿ ಸಾಗಾಣಿಕಾ ವೆಚ್ಚ ಮತ್ತು ದರಪಟ್ಟಿಯಲ್ಲಿ ಹೆಚ್ಚಳವಾಗಿದ್ದು ಮೇಲ್ಕಂಡ ಅಂದಾಜು ಪಟ್ಟಿಗೆ ಶೇಕಡಾ 18 ರಷ್ಟು ಹೆಚ್ಚುವರಿ ದರ ಸೇರಿಸಿ ಕೊಡಬೇಕಾಗಿ ಕೋರುತ್ತೇವೆ.**

ದೇಶಿ ಸೇವಾ ಫೌಂಡೇಷನ್ ಪರವಾಗಿ
[ಶ್ರೀಧರ್ ಮೂರ್ತಿ]
ಮ್ಯಾನೇಜಿಂಗ್ ಟ್ರಸ್ಟಿ

ನಂ. ಬಿ-18, ಗೋಧೂಳಿ, 2ನೇ ಮಹಡಿ, 2ನೇ ಮುಖ್ಯರಸ್ತೆ, ಕೆ.ಇ.ಬಿ. ಲೇಔಟ್, ಬಿಟಿಎಂ 1ನೇ ಹಂತ, ಬೆಂಗಳೂರು - 560 029.
Ph : 8317312611 / 9738019090 E-mail : desifoundation2020@gmail.com

ಕಾಗೋಡು ತಿಮ್ಮಪ್ಪ, ಬಿ.ಕಾಂ., ಬಿ.ಎಲ್.,
ಕಂದಾಯ ಸಚಿವರು
ಮತ್ತು
ಶಿವಮೊಗ್ಗ ಜಿಲ್ಲಾ ಉಸ್ತುವಾರಿ ಸಚಿವರು
**KAGODU THIMMAPPA, B.com., B.L.,**
Revenue Minister
and
Shivamogga District Incharge Minister

ಕೊಠಡಿ ಸಂಖ್ಯೆ 315
3ನೇ ಮಹಡಿ, ವಿಧಾನಸೌಧ
ಬೆಂಗಳೂರು – 560 001
ದೂ: 080–22252536
ಫ್ಯಾಕ್ಸ್: 22033450
ಮೊಬೈಲ್: 9448066316
Office of the Revenue Minister
Room No. 315, 3rd Floor
Vidhana Soudha, Bengaluru-560 001

146

ಕಂಸಕ/ 2424 /2017

ದಿನಾಂಕ/Date: 02.05.17

: ನ ಡ ವ ಳಿ :

ಶ್ರೀ ಶ್ರೀಧರಮೂರ್ತಿ, ವ್ಯವಸ್ಥಾಪಕ ನಿರ್ದೇಶಕರು, ದೇಶಿ ಸೇವಾ ಫೌಂಡೇಷನ್ (ರಿ.) ಬೆಂಗಳೂರು ಇವರು ನೀಡಿದ ಮನವಿಯನ್ನು ಈ ಪತ್ರದೊಂದಿಗೆ ಲಗತ್ತಿಸಿದೆ. ಸರ್ಕಾರಿ ಸುತ್ತೋಲೆ ಸಂಖ್ಯೆ ಇಡಿ:83 ಎಂ.ಸಿ.ಡಿ. 2014, ದಿನಾಂ 31–07–2014ರ ಪ್ರಕಾರ ರಾಜ್ಯದ ಎಲ್ಲಾ ಶಾಲೆ ಮತ್ತು ಕಾಲೇಜುಗಳಿಗೆ ರೂ.4950–00ರ ಮುಖಬೆಲೆಯ "ಗಾಂಧಿ ಚರಕ"ಗಳನ್ನು ಪೂರೈಕೆ ಮಾಡಿರುತ್ತಾರೆ. ಆದರೆ ಮೇಲ್ಕಂಡ ಸುತ್ತೋಲೆಯಲ್ಲಿ ಸರ್ಕಾರಿ ಶಾಲೆ/ಕಾಲೇಜುಗಳ ಸಂಚಿತ ನಿಧಿಯಿಂದ ಖರೀದಿಸುವಂತೆ ನಿರ್ದೇಶಿಸಲಾಗಿರುವುದು ಸರಿಯಷ್ಟೆ. ಆದರೆ ಬಹುದೇಕ ಶಾಲೆ–ಕಾಲೇಜುಗಳಲ್ಲಿ ಸಂಚಿತ ನಿಧಿಯಲ್ಲಿ ಹಣ ಇಲ್ಲದಿರುವುದರಿಂದ, ಸರ್ಕಾರಿ ಶಾಲಾ–ಕಾಲೇಜುಗಳಲ್ಲಿ ಲಭ್ಯವಿರುವ ಯಾವುದೇ ಅನುದಾನದಿಂದ ಅಥವಾ ಶಾಲಾ ಕಾಲೇಜುಗಳ ಖಾತೆಯಲ್ಲಿರುವ ಯಾವುದೇ ಬಡ್ಡಿ ಹಣವನ್ನು ಬಳಸಿಕೊಂಡು, ತಾಲ್ಲೂಕು ಕೇಂದ್ರಗಳಲ್ಲಿ ಗಾಂಧಿ ಚರಕವನ್ನು ಖರೀದಿಸಲು ಸರ್ಕಾರದಿಂದ ಅನುಮತಿ ನೀಡುವಂತೆ ಅವರು ತಮ್ಮ ಮನವಿಯಲ್ಲಿ ಕೋರಿರುತ್ತಾರೆ.

ಆದುದರಿಂದ, ದೇಶಿ ಸೇವಾ ಫೌಂಡೇಷನ್ (ರಿ.) ಬೆಂಗಳೂರು ಇವರಿಗೆ ಗಾಂಧಿ ಚರಕದ ಬಾಬ್ತು ಸರ್ಕಾರಿ ಶಾಲೆ/ಕಾಲೇಜುಗಳ ಯಾವುದೇ ಅನುದಾನದಿಂದ ಅಥವಾ ಶಾಲೆ–ಕಾಲೇಜುಗಳ ಖಾತೆಯಲ್ಲಿ ಲಭ್ಯವಿರುವ ಯಾವುದೇ ಬಡ್ಡಿ ಹಣದಿಂದ ತಾಲ್ಲೂಕು ಕೇಂದ್ರದಿಂದ ಪಾವತಿ ಮಾಡಲು ಸೂಕ್ತ ಆದೇಶ ಹೊರಡಿಸುವಂತೆ ತಮ್ಮಲ್ಲಿ ಕೋರಿದೆ.

(ಕಾಗೋಡು ತಿಮ್ಮಪ್ಪ)

915

ಗೌರವಗಳೊಂದಿಗೆ)
ಶ್ರೀ ತನ್ವೀರ್ ಸೇಠ್‌ರವರು,
ಮಾನ್ಯ ಪ್ರಾಥಮಿಕ ಹಾಗೂ ಪ್ರೌಢ ಶಿಕ್ಷಣ ಸಚಿವರು,
ಕರ್ನಾಟಕ ಸರ್ಕಾರ.